ಸರ್ಕಾರದ ಕೃಷಿ ಮಂತ್ರಿಗಳು ಸರ್ಕಾರ ಶಿಫಾರಸ್ಸು ಮಾಡಬೇಕು. ಆ ಶಿಫಾರಸ್ಸಿನ ಆಧಾರದ ಮೇಲೆ ಕೇಂದ್ರ ಸರಕಾರದವರು ಡೈರೆಕ್ಟರನ್ನು ನಾಮಿನೇಟ್ ಮಾಡತಕ್ಕಂಥ ಪದ್ಧತಿ ಇದೆ. ಆದರೆ ಆವರವರ ಪ್ರಭಾವವನ್ನು ಉಪಯೋಗಿಸಿಕೊಂಡು ರಾಜ್ಯ ಸರಕಾರದ ಅನುಮತಿಯೇ ಇಲ್ಲದೆ, ಕೇಂದ್ರದ ಪ್ರಭಾವವನ್ನು ಉಪಯೋಗಿಸಿಕೊಂಡು ಬರುವುದಾದರೆ ಹೊಗೆ ಸೊಪ್ಪು ಬೆಳೆಯ ಅನುಭವ ಇಲ್ಲದಿರತಕ್ಕಂಥಹವರನ್ನು ನಾಮಿನೇಟ್ ಮಾಡಿದ್ದಕ್ಕೆ ಈಗ ಅದನ್ನು ನೀವು ಬರೆದು ತಕ್ಷಣದಲ್ಲಿ ವಜಾ ಮಾಡತಕ್ಕಂಥಾದ್ದನ್ನು ಮಾಡಿ, ಯಾರಿಗೆ ತಂಬಾಕು ವಿಚಾರದಲ್ಲಿ ಅನುಭವ ಇದೆ ಅಂಥಹವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ತಾವು ಏನು ವ್ಯವಸ್ಥೆ ಮಾಡುತ್ತೀರಿ? ಇನ್ನು ಈ ಬ್ಯಾರನ್‌ಗಳನ್ನು ರಿನ್ಯೂ ಮಾಡತಕ್ಕಂಥಾದ್ದು ಏನಿದೆ ಇನ್ನೆರಡು ಮೂರು ದಿವಸಗಳಲ್ಲಿ ಅದರ ಅವಧಿಯೂ ಮುಗಿಯುತ್ತದೆ. ಹೀಗೆ ಅದರ ಅವಧಿ ಮುಗಿದ ಮೇಲೆ ಟೊಬ್ಯಾಕೋ ಬೋರ್ಡ್‌ನವರು ಪರ್ಮಿಷನ್ ಕೊಡಬೇಕು, ಲೈಸೆನ್ಸ್ ರಿನ್ಯೂ ಮಾಡಬೇಕಾಗಿದ್ದರೆ ಕೇಂದ್ರದವರು ಪರ್ಮಿಶನ್ ಕೊಡಬೇಕು. ಆದ್ದರಿಂದ ಇವೊತ್ತೇ ನಿಮ್ಮ ಅಧಿಕಾರಿಗಳಿಗೆ ಹೇಳಿ, ರಿನ್ಯೂ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ತಾವು ಕೇಂದ್ರದವರ ಜೊತೆಯಲ್ಲಾಗಲೀ, ಬೋರ್ಡ್ ಚೇರ್ಮನ್‌ರ ಜೊತೆಯಲ್ಲಾದರೂ ಮಾತನಾಡಿ ಅಥವಾ ಬೆಂಗಳೂರಿನಲ್ಲಿ ಅದಕ್ಕೆ ಸಂಬಂಧಪಟ್ಟಂಥ ಡೈರೆಕ್ಟರ್ ಆಫ್ ಮಾರ್ಕೆಟಿಂಗ್ ಅವರಿದ್ದಾರೆ ಅವರೊಂದಿಗಾದರೂ ಮಾತನಾಡಿ ತಕ್ಷಣದಲ್ಲಿಯೇ ಇವೊತ್ತು, ನಾಳೆಯೊಳಗೆ ವ್ಯವಸ್ಥೆ ಮಾಡಬೇಕು.

ಶ್ರೀ ಎ. ಟಿ ರಾಮಸ್ವಾಮಿ:- ತಂಬಾಕು ಬೆಳೆಗಾರರಿಗೆ ಬ್ಯಾರನ್ಸ್ ರಿನ್ಯೂ ಮಾಡದೆ ಇರುವುದಕ್ಕೆ ಕಾರಣ ಕೇಳುತ್ತಿದ್ದೇನೆಂದು ಹೇಳಿದಿರಿ. ನನಗೆ ತಿಳಿದು ಬಂದ ಹಾಗೆ ಅದಕ್ಕೆ ಇರುವ ಕಾರಣಗಳು ಎರಡು. ಬೇಡಿಕೆ ಹೆಚ್ಚಿಗೆ ಇಲ್ಲವಾದ ಕಾರಣ ನಾವು ಲೈಸೆನ್ಸ್‌ಅನ್ನು ಕೊಡುವುದಿಲ್ಲ ಎಂಬುದು ಒಂದಾದರೆ, ಮತ್ತೊಂದು ಆಂಧ್ರದಲ್ಲಿ ಈ ವರ್ಷ ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚು ಉತ್ಪಾದನೆಯಾಗಿದೆ. ಆ ಕಾರಣದಿಂದ ಕೊಡುವುದಿಲ್ಲ ಎಂದು ಹೇಳುತ್ತಾರೆ. ಆ ಸಬೂಬನ್ನು ತಾವು ಒಪ್ಪಿಕೊಂಡರೆ ರಾಜ್ಯದ ರೈತರ ಹಿತವನ್ನು ಹಾಳು ಮಾಡಿದ ಹಾಗೆ ಆಗುತ್ತದೆ ಮತ್ತು ಗೊಂದಲವೂ ಆಗುತ್ತದೆ. ಆ ಗೊಂದಲ ಸೃಷ್ಟಿಯಾಗುವುದಕ್ಕಿಂತ ಮುಂಚಿತವಾಗಿ ನೀವು ಅನುಮತಿಯನ್ನು ಕೂಡಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು:- ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ...

ಉಪಾಧ್ಯಕ್ಷಿಣಿಯವರು:- ಐದು ಜನ ಮಂತ್ರಿಗಳ ರೆಕಮಂಡೇಷನ್ ಮೇಲೆ ಸೆಂಟ್ರಲ್ ಟೊಬ್ಯಾಕೋ ಬೋರ್ಡ್‌ಗೆ ನಾಮಿನೇಟ್ ಮಾಡಿದ್ದಾರೆ ಎಂದು ಹೇಳಿದ್ದಾರೆ. ಆ ಐದು ಜನ ಸಚಿವರ ಜೊತೆಯಲ್ಲಿ ತಾವು ಮಾತನಾಡಿ.

ಮಂಗಳೂರು ರಸಗೊಬ್ಬರ ಕಾರ್ಖಾನೆಯ ನೌಕರರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ.

ಶ್ರೀ ವಿಜಯಕುಮಾರ ಶೆಟ್ಟಿ (ಸೂರತ್ಕಲ್):- ನಮ್ಮ ಮಂಗಳೂರು ರಸಗೊಬ್ಬರ ಕಾರ್ಖಾನೆಯಲ್ಲಿ ನೌಕರರು ಕೆಲವೊಂದು ಬೇಡಿಕೆಗಳನ್ನು ಮ್ಯಾನೇಜ್‌ಮೆಂಟ್‌ಗೆ ಕೊಟ್ಟಿದ್ದಾರೆ. ಕೊಟ್ಟು ಎರಡು ತಿಂಗಳು ಆಗಿದೆ. ಆದರೆ ಇಷ್ಟರವರೆಗೆ ಯಾವುದೇ ಒಂದು ಸೆಟಲ್‌ಮೆಂಟ್ ಆಗಲಿಲ್ಲ. ಆದ್ದರಿಂದ ಈ ಪರಿಸ್ಥಿತಿಯು ವಿಕೋಪಕ್ಕೆ ಹೋಗುವ ಮೊದಲು ಸರಕಾರದವರು

ನೌಕರರ ಈ ನ್ಯಾಯಯುತವಾದ ಬೇಡಿಕೆಗಳನ್ನು ಮ್ಯಾನೇಜ್‌ಮೆಂಟ್ ಮತ್ತು ನೌಕರರನ್ನು ಕರೆದು ಒಂದು ತೀರ್ಮಾನವನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ನಿಯಮ ೩೩೪ರ ಮೇರೆಗೆ

ಮೈಸೂರು ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯರ ಹುದ್ದೆಗಳ ಭರ್ತಿ

೫.೪೦ ಪಿ. ಎಂ.

ಶ್ರೀ ಕೆ. ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ):- ಮೈಸೂರು ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಖಾಲಿ ಹುದ್ದೆಗಳು ಎಷ್ಟಿವೆ? ಈಗಾಗಲೇ ಸರಕಾರದ ಎಲ್ಲ ಖಾಲಿ ಹುದ್ದೆಗಳನ್ನು ಇನ್ನು ಎರಡು ವಾರದಲ್ಲಿ ಭರ್ತಿ ಮಾಡುತ್ತೇವೆಂದು ಹೇಳಿ ಎರಡು ತಿಂಗಳಾದರೂ ಇನ್ನೂ ಭರ್ತಿ ಮಾಡಿಲ್ಲ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಬಂದವರಿಗೆ ೧೫ ಪರ್ಸೆಂಟ್ ಸೇರಿಸುತ್ತೇವೆಂದು ಸರ್ಕಾರ ತೀರ್ಮಾನ ತೆಗೆದುಕೊಂಡರೂ ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಇದರ ಬಗ್ಗೆ ಸಾರ್ವಜನಿಕರ ಹಿತದೃಷ್ಟಿಯಿಂದ ತಿಳಿಯಬಯಸುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ (ಶಿಕ್ಷಣ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆಯಲ್ಲಿ ದಿನಾಂಕ ೩೧-೫-೯೧ರ ವೇಳೆಗೆ ೨೪೧ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಹೊಲಿ ನೇಮಕಾತಿ ನಿಯಮಗಳ ಪ್ರಕಾರ ಗ್ರಾಮೀಣ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಆದ್ಯತೆ ನೀಡಲು ಅವಕಾಶವಿಲ್ಲ. ಸರ್ಕಾರವು ಗ್ರಾಮೀಣ ಅಭ್ಯರ್ಥಿಗಳಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ೧೫ ಒತ್ತಾಸೆ ಅಂಕಗಳನ್ನು ನೀಡಬೇಕೆಂದು ತೀರ್ಮಾನ ಕೈಗೊಂಡಿದೆ.

ಈ ನಿರ್ಧಾರವನ್ನು ಅನುಸರಿಸಿ ಜಾಲ್ತಿ ನಿಯಮಗಳಿಗೆ ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉಪಾಧ್ಯಕ್ಷೆಯವರು:- ಕೆ. ಹೆಚ್. ಹನುಮೇಗೌಡರ ವಿಷಯಕ್ಕೆ ೧೭ನೇ ತಾರೀಖು ಉತ್ತರ ಕೊಡಲಾಗಿದೆ. ಆದ್ದರಿಂದ ಇವತ್ತು ತೆಗೆಯುವುದಿಲ್ಲ.

ಮೂಡಬಿದ್ರೆಯ ಇರವೈಲಿಗೆ ಆರೋಗ್ಯ ಕೇಂದ್ರವನ್ನು ಒದಗಿಸುವ ಬಗ್ಗೆ

ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ):- ನನ್ನ ಕ್ಷೇತ್ರವಾದ ಮೂಡಬಿದಿರೆಯ ಇರವೈಲು ಎಂಬಲ್ಲಿಗೆ ಆರೋಗ್ಯ ಕೇಂದ್ರ ಒದಗಿಸುವಂತೆ ಜಿಲ್ಲಾ ಪರಿಷತ್ ಮಂಜೂರು ಮಾಡಿ ಸರ್ಕಾರದವರ ಅನುಮೋದನೆಗೆ ಕಳುಹಿಸಿದ್ದು ಇರವೈಲಿಗೆ ಮಂಜೂರಾತಿ ಕೊಟ್ಟಿರುವುದಿಲ್ಲ. ಈ ಬಗ್ಗೆ ಜಿಲ್ಲಾಪರಿಷತ್ ಇರವೈಲಿಗೆ ಆರೋಗ್ಯ ಕೇಂದ್ರ ಕೊಡಬೇಕಂದು ಪುನರಪಿ ಮಂಜೂರು ಮಾಡಿ ಅನುಮೋದನೆ ಕೊಡಬೇಕೆಂದು ಸರ್ಕಾರಕ್ಕೆ ಕಳಿಹಿಸಿಕೊಟ್ಟಿದೆ. ಹೀಗಾಗಿ ಬಡವರೇ ಹೆಚ್ಚಾಗಿ ವಾಸಿಸುವ ಈ ವಿಭಾಗಕ್ಕೆ ಆರೋಗ್ಯ ಕೇಂದ್ರವು ಅತ್ಯಾವಶ್ಯಕವಾಗಿರುವ ಕಾರಣ ಸರ್ಕಾರ ಈ ಬಗ್ಗೆ ಕೂಡಲೇ ಮಂಜೂರಾತಿ ನೀಡಬೇಕೆಂದು ಶಿಫಾರಸ್ ಮಾಡಬೇಕು. ಇದರ ಬಗ್ಗೆ ಸರ್ಕಾರ ಏನು ಮಾಡುವುದೆಂದು ನಾನು ತಿಳಿಯಲಾಶಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-